

## ಹುಲಿ ತಾಣವೀಗ ಹುಲಿಗೆಮ್ಮನ ಕೊಳ್ಳ!

ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಬಿ.ಎನ್. ಜಾಲಿಹಾಳ ಗ್ರಾಮದಲ್ಲಿರುವ ಹುಲಿಗೆಮ್ಮನ ಕೊಳ್ಳವು (ಜಲಪಾತ) ನೋಡಲು ನಯನ ಮನೋಹರವಾಗಿದೆ. ಜಲಪಾತ ಅಂತಲೂ ಕರೆಸಿಕೊಳ್ಳುವ ಹುಲಿಗೆಮ್ಮನ ಕೊಳ್ಳಕ್ಕೆ ಶತಮಾನಗಳ ಇತಿಹಾಸವಿದೆ. 'ಇಲ್ಲಿ ಋಷಿ, ಮುನಿಗಳು ತಪ್ಪಸ್ಸು ಮಾಡುತ್ತಿದ್ದರು ಮತ್ತು 5ನೇ ಶತಮಾನದಲ್ಲಿ ಚಾಲುಕ್ಯ ದೊರೆಗಳು ಇಲ್ಲಿಯೇ ಹೆಚ್ಚಾಗಿ ತಂಗುತ್ತಿದ್ದರು' ಎನ್ನುವ ಐತಿಹ್ಯವೂ ಇದೆ. ಹಿಂದೊಮ್ಮೆ ಇಲ್ಲಿ ಹುಲಿಗಳು ಹೆಚ್ಚಾಗಿದ್ದ ಕಾರಣಕ್ಕೆ 'ಹುಲಿಗೆಮ್ಮನ ಕೊಳ್ಳ' ಅನ್ನುವ ಹೆಸರು ಈ ಸ್ಥಳಕ್ಕೆ ಬಂದಿದೆ. ಅಲ್ಲದೆ ಹುಲಿಗೆಮ್ಮ, ಕೋಣಮ್ಮ ಮತ್ತು ಲಕ್ಷ್ಮಮ್ಮದೇವಿಯರ ಸಂಗಮ ಸ್ಥಳವೂ ಇದೆ ಆಗಿದೆ. ಮಳೆಗಾಲದಲ್ಲಿ ಮೈದುಂಬಿಹರಿಯುವ ಜಲಪಾತವು ಈ ಭಾಗದ ಪ್ರವಾಸಿಗರ ನೆಚ್ಚಿನ ತಾಣವಾಗಿದೆ. ಇದಕ್ಕೆ ಜಾಲಿಹಾಳ ಜಲಪಾತ ಅಂತಲೂ ಕರೆಯುತ್ತಾರೆ.

–ಮಹಾಂತೇಶ ಬಾಗೇವಾಡಿ, ಬಾದಾಮಿ

## ಕನಕಾಚಲಪತಿ ಸುತ್ತ 701 ಬಾವಿಗಳು



ಹಿಂದಿನ ಕಾಲದಲ್ಲಿ ದೇಗುಲದ ಬಾಗಿಲ ಬಳಿ ಕಲ್ಲಿನಲ್ಲೇ ನಾನಾ ರೀತಿಯ ಕೆತ್ತನೆ ಮಾಡಿ ಬಾಗಿಲ ಅಂದ ಹೆಚ್ಚಿಸುತ್ತಿದ್ದರು. ಚಿತ್ರದಲ್ಲಿ ಕಾಣುತ್ತಿರುವುದು ಇಂತಹದ್ದೇ ಒಂದು ಕಲ್ಲಿನ ಕೆತ್ತನೆಯ ಅಲಂಕಾರ. ಇದು ಕಂಡುಬಂದಿದ್ದು ಕೊಪ್ಪಳದ ಕನಕಗಿರಿಯ ಕನಕಾಚಲಪತಿ ದೇವಸ್ಥಾನದಲ್ಲಿ. ಈ ದೇಗುಲವನ್ನು ಎರಡನೆಯ ತಿರುಪತಿ ಅಂತಲೂ ಕರೆಯುವುದುಂಟು. ಇದೊಂದು ಐತಿಹಾಸಿಕ ಸ್ಥಳ. ದೇಗುಲದ ಸುತ್ತಮುತ್ತಲೂ ಹಿಂದೊಮ್ಮೆ ಒಟ್ಟು 701 ಬಾವಿಗಳಿದ್ದವಂತೆ. ಬಹುಶಃ ಈಗ ಅವುಗಳೆಲ್ಲವೂ ಭೂದೇವಿಯ ಒಡಲು ಸೇರಿರಬಹುದು. ಆ ಪೈಕಿ ಉಳಿದಿರುವ ಮೆಟ್ಟಿಲುಗಳಿಂದ ರಚಿತವಾದ ಬಾವಿಯೊಂದನ್ನು ಈಗಲೂ ಅಲ್ಲಿ ನೋಡಬಹುದು. ಬಾವಿಯ ಪಕ್ಕವೇ ಇರುವ ಪಾಳುಬಿದ್ದ ದೇಗುಲವೊಂದರಲ್ಲಿ ಭಗ್ನಗೊಂಡ ಶಿವಲಿಂಗವಿದ್ದು, ಅದರ ಬಳಿಯ ಮಂಟಪದ ಹೊಸ್ತಿಲಿನಲ್ಲಿ ಈ ಕಲ್ಲಿನ ಕೆತ್ತನೆ ಕಾಣುತ್ತದೆ. ಬಾವಿಯ ಒಳ ಹಾಗೂ ಹೊರಭಾಗದಲ್ಲಿ ಆಕರ್ಷಣೀಯ ಮಿಥುನ ಶಿಲ್ಪ ಕಲಾಕೃತಿಗಳು ನೋಡಬಹುದು. ಈ ಸ್ಥಳ—ವು ಕನಕಗಿರಿ ಗಂಗಾವತಿಯಿಂದ 21 ಕಿ.ಮೀ., ಕೊಪ್ಪಳದಿಂದ 40 ಕಿ.ಮೀ. ದೂರದಲ್ಲಿದೆ.

–ಸೌಮ್ಯ ಶಿಗ್ಗಾಂವಕರ್, ಹಾಸನ



## ತೆಂಗಿಗೆ ಟಿನ್ ಗಾರ್ಡ್!



ಮಂಡ್ಯ ಸುತ್ತಮುತ್ತಲ ರೈತರು ಕೃಷಿ ಕಾರ್ಮಿಕರ ಕೊರತೆಯಿಂದಾಗಿ, ತಮ್ಮ ಜಮೀನಿನಲ್ಲಿ ಹೆಚ್ಚಾಗಿ ತೆಂಗಿನಗಿಡಗಳನ್ನು ನೆಡುತ್ತಿದ್ದಾರೆ. ತೆಂಗು ಬೆಳೆಯಲು ಕೃಷಿ ಕಾರ್ಮಿಕರ ಅಗತ್ಯ ಕಡಿಮೆ. ಕೃಷಿ ಕಾರ್ಮಿಕರ ಸಮಸ್ಯೆಯ ಜೊತೆಗೆ ತೆಂಗಿನಗಿಡಗಳಿಗೆ ಕಾಡುಹಂದಿಗಳ, ಮುಳ್ಳುಹಂದಿಗಳ ಹಾಗೂ ಹೆಗ್ಗಣಗಳ ಕಾಟವು ರೈತರಿಗೆ ತಪ್ಪಿದ್ದಲ್ಲ. ರಾತ್ರಿವೇಳೆ ದಾಳಿಗಿಳಿಯುವ ಇವುಗಳು ಗಿಡಗಳನ್ನೆಲ್ಲ ಹಾಳುಮಾಡುತ್ತವೆ. ಈ ಸಮಸ್ಯೆಗೆ ಪರಿಹಾರವಾಗಿ ಇಲ್ಲೊಬ್ಬ ರೈತ ತನ್ನ ಜಮೀನಿನಲ್ಲಿ ನೆಟ್ಟಿದ್ದ ನೂರಾರು ತೆಂಗಿನ ಸಸಿಗಳ ಬುಡಕ್ಕೆ ತಗಡಿನ ಡಬ್ಬಗಳನ್ನು (ಟಿನ್‌ಗಳನ್ನು) ಅಳವಡಿಸಿದ್ದಾರೆ. ಕಾಡುಹಂದಿಗಳು, ಮುಳ್ಳುಹಂದಿಗಳು ಮತ್ತು ಹೆಗ್ಗಣಗಳು ತೆಂಗಿನಗಿಡಗಳ ಮೇಲೆ ದಾಳಿಗಿಳಿದಾಗ ಟಿನ್‌ಗಳಿಂದ ಹೊರಡುವ ಶಬ್ದಕ್ಕೆ ಭಯಗೊಂಡು ಸ್ಥಳದಿಂದ ಕಾಲ್ಕೀಳುತ್ತವೆ. ಈ ಉಪಾಯದಿಂದ ಟಿನ್‌ಗಳಿಗೂ ಈಗ ಬೇಡಿಕೆ ಹೆಚ್ಚಾಗಿದೆ. ಮುಂಚೆ ಅವುಗಳನ್ನು ಕೇಳುವವರೇ ಇರಲಿಲ್ಲ.

–ಸಿ. ಸಿದ್ದರಾಜು ಆಲಕೆರೆ, ಮಂಡ್ಯ